ಇಂದು ದಿನಾಂಕ:10.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು:** ಪ್ರತಿವಾದಿ ನಂ.3 ನೇದವರ ಪರ ಶ್ರೀ ಹೆಚ್ ಎಸ್ ಕೆ ವಕೀಲರಿಂದ:

1ನೇ ಪ್ರತಿವಾದಿ ನನ್ನ ಗಂಡ. 1ನೇ ಪ್ರತಿವಾದಿ ನನ್ನಿಂದ ವಿಚೇದಾನ ಕೋರಿ ಎಂ ಸಿ ನಂ. 47/2011 ರಂತೆ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಮತ್ತು 1ನೇ ಪ್ರತಿವಾದಿ ದಿನಾಂಕ 24-01-2013 ರಂದು ಅರ್ಜಿ ಸಲ್ಲಿಸಿ ರಾಜಿಯಾಗಿ ದಿನಾಂಕ 31-01-2013 ರಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ರಾಜಿ ಅರ್ಜಿಯಲ್ಲಿ ನನಗೆ ಮತ್ತು ನನ್ನ ಮಗಳಿಗೆ ಎಂದು ಹೇಳಿ 1 ಲಕ್ಷ 20 ಸಾವಿರ ರೂಗಳನ್ನು ಜೀವನಾಂಶ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಕೇವಲ ನನಗೆ ಮಾತ್ರ 1 ಲಕ್ಷ 20 ಸಾವಿರ ರೂ ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಅದರಂತೆ ನನಗೆ ನ್ಯಾಯಾಲಯದ ಮುಂದೆ 1 ಲಕ್ಷ 20 ಸಾವಿರ ರೂಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ.

2. 1ನೇ ಪ್ರತಿವಾದಿಗೆ ಸಾತೇನಹಳ್ಳಿಯಲ್ಲಿ 2 ಜಮೀನಗಳು ಹಾಗೂ ಒಂದು ಮನೆ ಇರುತ್ತವೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ವಾದ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ಸಹಿ ಮಾಡುವ ಪೂರ್ವದಲ್ಲಿ ವಾದ ಪತ್ರದ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಮನೆಯ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲದಿದ್ದರೂ ಸೇರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ವ್ಯವಸಾಯವನ್ನು ಹೊರತುಪಡಿಸಿ ಹೋಟೆಲ್ ನಲ್ಲಿ ಕೆಲಸ ಮಾಡುತ್ತಾರೆ. ನನ್ನ ವಾದ ಪತ್ರದಲ್ಲಿ 1ನೇ ಪ್ರತಿವಾದಿಯ ಉದ್ಯೋಗ ಎಂದು ಬರೆಸಿರುತ್ತೇನೆ. ಪ್ರತಿವಾದಿ 1 ರವರು ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 1 ಲಕ್ಷ 20 ಸಾವಿರ ರೂಗಳನ್ನು ಸಾಲ ಮಾಡಿ ನನಗೆ ನೀಡಿರುತ್ತಾನೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

3. ಕಳೆದ 10-15 ವರ್ಷಗಳಿಂದ ಮಳೆ ಇಲ್ಲದೇ ಬೆಳೆಗಳು ಸರಿಯಾಗಿ ಬರುತ್ತಿಲ್ಲ ಎಂದರೆ ಸರಿಯಲ್ಲ. ಹೊಲದ ಉತ್ಪನ್ನಗಳಿಂದ ಬಂದ ಹಣ ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಕೊಳವೆ ಬಾವಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಕೊಳವೆ ಬಾವಿ ಇದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನನಗೆ ಹಣ ನೀಡಲು ಹಾಗೂ 1ನೇ ಪ್ರ 2 ವಾದಿಯ ಜೀವನ ನಡೆಸಲು ಸಾಲವನ್ನು ಮಾಡಿಕೊಂಡಿದ್ದು ಸದರಿ ಸಾಲ ತೀರಿಸಲೆಂದು 1ನೇ ಪ್ರತಿವಾದಿ ಸರ್ವೆನಂ.84/1 ನ್ನು ಜಮೀನನ್ನು ಬೇರೊಬ್ಬರಿಗೆ 1 ಲಕ್ಷ 75 ಸಾವಿರ ರೂಗಳಿಗೆ ಮಾರಾಟ

ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಗಳಿಗೆ ಆಸ್ತಿ ಕೊಡಬೇಕು ಎಂದು ಹೇಳಿ ಆ ರೀತಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಆ ರೀತಿ ಸೃಷ್ಟಿ ಮಾಡಿಕೊಂಡ ಖರೀದಿ ಪತ್ರ ಅಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಮಗಳಿಗೆ ಆ ದಿನವೇ ಒಟ್ಟಾರೆಯಾಗಿ ಜೀವನಾಂಶವನ್ನು ಪಡೆದುಕೊಂಡಿದ್ದರು ಕೂಡ ನನ್ನ ಮಗಳಿಗೆ ಜಮೀನು ಕೊಡುತ್ತೇವೆ ಎಂದು ಹೇಳಿದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ದಾವೆ ಮಾಡುವ ಕಾಲಕ್ಕೆ ಪ್ರತಿವಾದಿ 1 ರವರು ಆಸ್ತಿಯನ್ನು ಮಾರಾಟ ಮಾಡಿದ್ದ ಕಾರಣದಿಂದ ರಿ.ಸ.ನಂ.84/1 ನ್ನು ಒಟ್ಟು ಕುಟುಂಬದ ಆಸ್ತಿಯಾಗಿ ಉಳಿದಿರಲಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಸದರಿ ಆಸ್ತಿಯನ್ನುಮಾರಾಟ ಮಾಡಿರುವ ಬಗ್ಗೆ ನನಗೆ 2017 ರಲ್ಲಿ ಗೊತ್ತಾಗಿರುತದೆ. ಆಗ ನಾನು ಸಾತೇನಹಳ್ಳಿಯಲ್ಲಿ ಇದ್ದೆ. ಸದರಿ ಆಸ್ತಿಯನ್ನು 2014 ರಲ್ಲಿಯೇ ಮಾರಾಟ ಮಾಡಿದ್ದು ಗೊತ್ತಿದ್ದರು ಕೂಡ 2017 ನನಗೆ ಗೊತ್ತಾಗಿರುತ್ತದೆ ಎಂದು ಸುಳ್ಳು ಸಾಕ್ಷ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನ್ನ ಮಗಳಿಗಾಗಲೀ ನನಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಅನ್ಯಾಯ ಮಾಡಬೇಕು ಎಂದು ಹೇಳಿ ಆವ ಅನಾವಶ್ಯಕ ಪಕ್ಷಗಾರ ಆಗಿದ್ದರೂ ಕೂಡ ಆತನನ್ನು ದಾವೆಯಲ್ಲಿ ಸೇರಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು 3 ನೇ ಪ್ರತಿವಾದಿಗೆ ಆದಂತಹ ಖರ್ಚು ವೆಚ್ಚವನ್ನು ಕೊಡಲು ಬಾಧ್ಯಸ್ತಳಾಗಿರುತ್ತೇನೆ ಎಂದರೆ ಸರಿಯಲ್ಲ.

(1ನೇ ಪ್ರತಿವಾದಿ ಪರ ವಕೀಲರು ಹಾಗೂ 1ನೇ ಪ್ರತಿವಾದಿ ಗೈರು ಹಾಜರಿರುವ ಕಾರಣದಿಂದ ಹಾಗೂ 2 ನೇ ಪ್ರತಿವಾದಿ ಏಕತರ್ಪಿಯವಾಗಿ ನಿರ್ದಾರಗೊಂಡಿರುವ ಕಾರಣದಿಂದ ಪಾಟೀ ಸವಾಲು ಪ್ರತಿವಾದಿ 1 ಮತ್ತು 2 ರವರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.